ಮಗಳಿದ್ದಾಳೆ ಅಂತ ತಿಳಿದಾಗ ತನಗಾಗಿಯೇ ಅವನನ್ನು ದೇವರು ಇಲ್ಲಿಗೆ ತಂದಿದ್ದಾನೆಂದು ಭಾವಿಸಿದ್ದು ಸುಳ್ಳೇ? ಆ ಒಂದೆರಡು ತಿಂಗಳು ಮಾಧವಿಗೆ ನೆನಪಾದರೀಗಲೂ ವಿಷಾದದ ಮಂಕು ಆವರಿಸುತ್ತದೆ. ಎಷ್ಟು ಬದಲಾಗಿದ್ದೆ ನಾನು. ಎಂತಹ ಬಂಗಾರ ಬಣ್ಣದ ಕನಸುಗಳವು. ದಂಡವತೆ ಕೂಡ ನನ್ನೊಂದಿಗೆ ಹಾಗೆ ನಡೆದುಕೊಂಡನೇ? ಅಥವಾ ನಾನು ಮಾತ್ರ ಹಾಗೆ ಭಾವಿಸಿದೆನೇ? ಹೀಗೆ... ನನ್ನ ಪಕ್ಕದಲ್ಲೇ ಚೇರ್ ಎಳೆದುಕೊಂಡು... ಅದೆಷ್ಟು ನಗೆ... ಏರುದನಿಯ ಮಾತು. ಸ್ಟಾಫ್‌ರೂಂ ಗಲಗಲಿಸುತ್ತಿತ್ತು. ಸಬ್ ಖುಷ್ ಅನ್ನುವ ಹಾಗೆ. ಎರಡೇ ತಿಂಗಳು. ಅವನ ಮದುವೆಯಾಯ್ತು. 45ರ ದಂಡವತೆ 20ರ ಚಂದದ ಹುಡುಗಿಯನ್ನು ಮದುವೆಯಾಗಿ, ಕಾಲೇಜಿಗೂ ಕರೆತಂದ. ಪಾರ್ಟಿ ಕೊಟ್ಟ. ಸಂಸ್ಥೆಯ ಇನ್ನೊಂದು ಕಾಲೇಜು ಗದಗಿಗೆ ಹೋದ. ಅವನ ಹೆಂಡತಿಯ ಊರಿಗೂ ಸಮೀಪವಂತೆ. ಆವತ್ತೂ ದೊಡ್ಡವಾಡ ಸರ್ ಊಟ ಮಾಡುತ್ತ ಅಂದೇಬಿಟ್ಟರು. "ನಂ ಮಾಧವಿ ಮೇಡಂನ್ನೋರು ದಿಢೀರಂತ ಲಗ್ನಾ ಮಾಡಿಕ್ಯಂಡು ಬಂದ್ ಹೋಳಗಿ ಊಟ ಹಾಕಸ್ಬೇಕ್ರಪ್ಪ." ಮಾಧವಿಗೆ ಸರೀ ನೆನಪಿದೆ. ಏನಾಗಿತ್ತು ತನಗಾಗ? ಮನಸ್ಸು ಕೇಕೆ ಹಾಕಿ ರಂಗದಲ್ಲಿ ತುಂಡಗುಪ್ಪು ತೆಗೆಯುತ್ತಿತ್ತು. ಅಲಲಲ ಕೀಹಾ, ಯಾರಿದ್ದೀರಿ ಇಲ್ಲಿ ಗಂಡಸರು. ಈ ಮಾಧವಿ ಎಂಬ ಮುಪ್ಪಿನ ಜವ್ವನೆಯೊಂದಿಗೆ ಲಗ್ನ ಮಾಡಿಕೊಳ್ಳುವ, ಬ್ಯಾಡ, ಕೂಡಿಕೆ ಮಾಡಿಕೊಳ್ಳುವ, ಬ್ಯಾಡವೇ ಬ್ಯಾಡ... ಒಂದು ರಾತ್ರಿಗೆ, ಒಂದು ತಾಸಿಗೆ, ಒಂದು ಸರ್ತಿಗೆ, ಅದೇನೋ ಗಂಡಸ್ತನ ಅಂತೀರಲ್ಲ... ಹಾಗಂದರೇನಂತ ಸಾಕ್ಷಾತ್ಕಾರ ಮಾಡಿಸಬಲ್ಲ ಮರ್ದ ಯಾರಿದ್ದೀರಿ?... ಒಳಗಿನ ಕಿರುಚು ಹೊರಬಂದೀತೆಂಬ ಗಾಬರಿಯಲ್ಲಿ ಹೋಳಿಗೆ ಮುರಿದು ನುಂಗಿದ್ದೇ ನುಂಗಿದ್ದು. ಮಾಧವಿ ಆಮೇಲಿಂದ ಬಲು ಸೂಕ್ಷ್ಮವಾದಳು. ಥೈರಾಯ್ಡು ಬಾಧಿಸುತ್ತಿರುವ ಮನಸ್ಸು ಎಲ್ಲಿ ಯಾವ ಕ್ಷಣದಲ್ಲಿ ಯಾರ ಮುಂದೆ ಥಟ್ಟಂತ ಬಿಕ್ಕಿಬಿಡುತ್ತದೆಯೋ ಎಂಬ ಗಾಬರಿಯಲ್ಲಿ ಮನಸ್ಸನ್ನು ಸೀಜ್ ಮಾಡಿಹಾಕಿದಳು. ಮುಖಕ್ಕೆ ತಗಡಿನ ಪಟ್ಟಿ ಹೊಡಿಸಿದಂತೆ ನಿರ್ಭಾವುಕಳಾದಳು. ಈ ನಟನೆ ಎಷ್ಟು ಘೋರ ಎನ್ನುವುದು ಅವಳಿಗಲ್ಲದೆ ಇನ್ಯಾರಿಗೆ ಗೊತ್ತು? ಉಬ್ಬಿಸಿಟ್ಟ ಬಲೂನಿನಂತೆ ಮನಸ್ಸನ್ನು ಉಬ್ಬಿಸಿ ಉಬ್ಬಿಸಿ ಹೊರುವುದು! ಸ್ವಲ್ಪ ಯಾಮಾರಿದರೂ ಟಪ್ ಅಂತ ಒಡೆದೀತೆಂಬ ಭಯ. ಮಾಧವಿ ಬಹಳ ಬೆಳೆದಿದ್ದಾಳೆ. ಅದೇ ಕ್ಲಾಸ್‌ರೂಂ ಅದೇ ಸ್ಟಾಫ್‌ರೂಂ. ಅದೇ ಕುರ್ಚಿ, ಅದೇ ಟೇಬಲ್ಲು. ಜನ ಬದಲಾದರು, ಜಗತ್ತು ಬದಲಾಯಿತು. ಪಾಠದ ನಿಯಮಗಳು ಬದಲಾದವು. ಪಾಠ ಮಾಡಿದೆವಾ, ಮಕ್ಕಳಿಗೆ ತಿಳಿಯಿತಾ? ಯಾರಿಗೆ ಬೇಕು? ಈಗಿರುವುದು ಬರೀ ಅಪ್ಲೋಡ್ ಮಾಡುವುದು. ಏನು ಕಲಿಸಿದ್ದೇವೆಂದು ಅಪ್ಲೋಡ್ ಮಾಡುವ ಭರಾಟೆಯಲ್ಲಿ, ಕ್ಲಾಸ್‌ರೂಂಗಳು ಬೇವಾರ್ಸಿಗಳಾಗಿಬಿಟ್ಟಿವೆ. ಮಾಧವಿಗೆ ತಲೆಗೆ ಹತ್ತಿದರೆ ಅವಳು ಬೈದುಕೊಳ್ಳುವುದು ಹೀಗೆ. ಆದರೆ, ಎಲ್ಲರೆದುರಲ್ಲ. ಮನೆಯೆಂಬ ಖೋಲಿಯಲ್ಲಿ ದಿನ ದಿನ ನಡೆದ ಎಲ್ಲವನ್ನೂ ಚೂರುಪಾರೂ ಬಿಡದೆ ಉಜಳಣೆ ಮಾಡಿ ಮುಳುಗಿಸುವುದು ಅವಳಿಗೆ ರೂಢಿ. ಕೆಲವೊಮ್ಮೆ ಸಿಟ್ಟು ನೆತ್ತಿಗೇರಿ–ಆ ಹಲ್ಕಟ್ ದೊಡ್ಡವಾಡ ನಾಳೆಗೇನಾದ್ರೂ ಬರ್ಲಿ ಹಲ್ಕಿರಿತಾ. ಅಂವ್ನ ಮುಖಕ್ಕ ಥೂ ಅಂತ ಉಗೀದಿದ್ರೆ ನಮ್ಮಪ್ಪಗ ಹುಟ್ಟಿದ್ದೇ ಅಲ್ಲ ನಾನು–ಅಂತೆಲ್ಲ ಒದರಿಕೊಳ್ಳುವ ಜರೂರತ್ತಿದ್ದರೆ ಅವಳು ಅಡಿಗೆಮನೆ ನಲ್ಲಿಯನ್ನು ಜೋರಾಗಿ ಬಿಟ್ಟುಬಿಡುತ್ತಾಳೆ. ಆಮೇಲೆ, ನಾನು ಅಪ್ಪನಿಗೆ ಹುಟ್ಟಿದೋಳು ಅಂದೆನಲ್ಲಾ? ಅದು ಸರಿಯಾ? ಹುಟ್ಟಿಸಿದವ ಅಪ್ಪ ಅಷ್ಟೇ ಅಲ್ಲವಾ? ಅಂತ ಖೋಲಿ ತುಂಬ ಧಿಮಿಧಿಮಿ ಓಡಾಡುತ್ತಾಳೆ. "ನಮ್ಮ ಬಯ್ಗುಳಗಳು ಸಹ ಹೆಣ್ಣಿಗೆ ಎಷ್ಟು ಕನಿಷ್ಠ ಮಾಡುತ್ತವೆ, ಅಲ್ಲವಾ?" ಎಂದು ಥೇಟ್ ಉಡುಪಿಯ ರಾಜೀವಿಯ ಹಾಗೆ ಮಾತಾಡಿ ನಗುತ್ತಾಳೆ.

ಮಾಧವಿಗೆ ಈಗೀಗ ಈ ನೌಕರಿ ಬಿಟ್ಹಾಕಿದರೆ ಹೇಗೆ? ಎಂಬ ಪ್ರಶ್ನೆ ಹುಟ್ಟಿ ಎದ್ದೆದ್ದು ಬೀಳುತ್ತಿದೆ. "ನೌಕ್ರಿ ಇಲ್ಲಾ ಅಂತ ಜನ ಬಾಯ್‌ಬಾಯ್ ಬಿಟ್ಟು ನಾಲಗಿ ಚಾಚಕಂಡಿರೋ ಕಾಲದಾಗ, ಈಗಿತ್ತಾಗ ಭರಪೂರ ಸಂಬಳ ತಗೋಳಾಕ ಸುರು ಮಾಡಿದಾಕಿ, ಬಿಡ್ತೀನಂದ್ರ ಏನಂತಾರ, ಹುಚ್ಚ ಅದೀ ಯಾನ?"